ಹುಡುಗಿಯಾಗಿದ್ರೆ ಅವರು ಸುಮ್ಮನಿರ್ತಿದ್ರಾ? ಮೂಸಾಕುಞಿ ಹೇಳಿದ್ದೇ ಸರಿ. ಇಂತವರನ್ನೆಲ್ಲ ಸುಮ್ಮನೆ ಬಿಡ್ಬಾರದು. ಪ್ರಾಯಕ್ಕೆ ಬಾರದವಳನ್ನು ಕದ್ದು ಓಡಿಸಿಕೊಂಡು ಹೋದ್ದಲ್ವಾ. ಮಾರಾಟ ಮಾಡುದಿಲ್ಲಂತ ಏನಂತೆ ಗ್ಯಾರಂಟಿ. ಅವ ಅನುಭವಿಸ್ಲಿ". ಮೂಸಾಕುಞಿ ತಂದ ಕಾರಿನೊಳಗೆ ಮಗಳನ್ನು ತಳ್ಳುತ್ತ ಸುರೇಶ ಹೇಳುತ್ತಿದ್ದಾಗ, ರಕ್ಷಾ "ಪೊಪ್ಪಾ, ಆರೀಫನ ಮೇಲೆ ಕೇಸು ಮಾಡ್ಬೇಡ. ಅವ ನನ್ನನ್ನು ಕಿಡ್ನ್ಯಾಪ್ ಮಾಡಿದ್ದಲ್ಲ" ಅಂದುಬಿಟ್ಟಿದ್ದಳು. ಸುರೇಶ ಕಣ್ಣು ಹೊರಳಿಸುತ್ತ ಮೈ ಮೇಲೆ ಭೂತ ಹೊಕ್ಕವನಂತೆ ಏರು ಸ್ವರದಲ್ಲಿ, "ಆರೀಫ ಅಂತೆ ಆರೀಫ. ಬೇವಾರ್ಸಿ. ನನ್ನ ಮರ್ಯಾದಿ ತೆಗೆದದ್ದು ಸಾಕಾಗಲಿಲ್ವಾ ಮೂರ್ಕಾಸಿನ ರಂಡೆ. ನಡಿ ಮನೆಗೆ. ನಾಲ್ಕು ದಿನ ಚೋರು ಕೊಡದಿದ್ರೆ ಸಮಾ ಆಗ್ತದೆ" ಎಂದು ಕಿರುಚುತ್ತಾ ಅವಳ ಮುಖದ ಮೇಲೆ ಬಾರಿಸಿ ರಬಕ್ಕನೆ ಕಾರ್ ಬಾಗಿಲು ಹಾಕಿಕೊಂಡಿದ್ದ. ಏಟಿನ ಭಾರಕ್ಕೆ ಅವಳ ತುಟಿ ಒಡೆದಿತ್ತು. ಮನೆಗೆ ಹೋದ ಗಳಿಗೆಯಿಂದ ಹೀಗೆಲ್ಲ ಆಗಿದ್ದೇ ಸುಳ್ಳೇನೋ ಅನ್ನುವಂತೆ ನೇರ್ಪಾಕಿದ್ದವಳು ಹದಿನೆಂಟು ತುಂಬಿ ತಿಂಗಳೊಳಗೆ ಮನೆಯವರ ಕಣ್ತಪ್ಪಿಸಿ ಆರೀಫನ ಅಂಗಳಕ್ಕೆ ನಡೆದಿದ್ದಳು. ಇನ್ನು ಆದದ್ದಾಗಲಿ ಅಂತ ಅವರನ್ನು ಅವರ ಪಾಡಿಗೆ ಬಿಟ್ಟುಬಿಡುವುದೊಳ್ಳೆಯದೆಂದ ಫಕೀರಿಚ್ಚನ ಮಾತಿಗೆ ಸುರೇಶ ಫೂತ್ಕರಿಸಿದ್ದ. ಕೊಂಡಾಟದ ಮಗಳಲ್ಲಿ ಇಷ್ಟೊಂದು ಚದಿಯಾ? ನಾನು ಎದುರು ನಿಂತರೆ ಬರದೇ ಎಲ್ಲಿ ಹೋಗ್ತಾಳೆ? ಬಂದೇ ಬರ್ತಾಳೆ' ಅನ್ನುತ್ತ ಮತ್ತೆ ಸ್ಟೇಷನ್ ಏರಿದ್ದ. ಆದರೆ, ಪ್ರಕರಣ ಕೋರ್ಟ್ ಮೆಟ್ಟಿಲು ಹತ್ತಿತ್ತು.

ಪೊಲೀಸ್ ರಕ್ಷಣೆಯಲ್ಲಿದ್ದ ರಕ್ಷಾ ಎಲ್ಲರನ್ನು ನೋಡುತ್ತಿದ್ದಳು. ಪೊಪ್ಪ ಮತ್ತವನ ಗುಂಪು, ಅಮ್ಮ, ಅಕ್ಕಂದಿರು, ಭಾವಂದಿರು, ಅಣ್ಣ, ಸೋದರ ಮಾವಂದಿರು ಒಟ್ಟು ಸೇರಿದಾಗಲೆಲ್ಲ ಕೀಟಲೆ ಮಾಡುತ್ತ ಒಬ್ಬರಿಗೊಬ್ಬರು ರೇಗಿಸಿಕೊಳ್ಳುತ್ತಿದ್ದ ಕುಟುಂಬದ ಓರಗೆಯವರು! ತನ್ನನ್ನು ಹೊತ್ತೊಯ್ಯಲು ಪೂರ್ತಿ ತರವಾಡನ್ನೆ ತಂದಿದ್ದಾರೆ ಪೊಪ್ಪ. ಆವತ್ತು ಎಲ್ಲರೆದುರು ನೆತ್ತರು ಬರುವ ಹಾಗೆ ಪೆಟ್ಟುಕೊಟ್ಟದ್ದಲ್ಲದೆ ರಂಡೆ ಬೇವಾರ್ಸಿ ಅಂತೆಲ್ಲ ಬೇಡಂಗಟ್ಟೆ ಬೈದ್ರಲ್ಲ. ತನ್ನ ಕೆಂಪು ಕೆಂಪು ಕೆನ್ನೆಯ ಪುಚ್ಚೆ ಕಣ್ಣಿನ ಚಂದದ ಆರೀಫನನ್ನು ಮಾರಾಟ ಮಾಡುವವನು, ಕ್ರಿಮಿನಲ್‌ಮೈಂಡ್ ಅಂತೆಲ್ಲ ಬೊಬ್ಬೆ ಮಾಡಿ; ಅವನ ಮೇಲೆ ಕಿಡ್ನ್ಯಾಪ್ ಕೇಸ್ ಹಾಕಿ ಅವಮಾನ ಮಾಡಿದ ಪೊಪ್ಪನ ಮೇಲೆ ಸೇಡು ತೀರಿಸಿಕೊಳ್ಳಲು ರಕ್ಷಾಳಿಗೆ ಬುರ್ಖಾ ಅದ್ಭುತ ಅಸ್ತ್ರವಾಗಿತ್ತು. ಅದಕ್ಕಾಗೇ ಅವಳು ಆರೀಫನ ಹತ್ತಿರ ಬುರ್ಖಾ ತೊಟ್ಟು ಕೋರ್ಟಿಗೆ ಬರುತ್ತೇನೆಂದಿದ್ದಳು. ಅವಳ ಹಟ ತಿಳಿದ ಫಕೀರಿಚ್ಚ,

'ಅದೊಂದು ಮಾಡ್ಬೇಡ ಮೋಳೆ. ನಿಂಗೆ ಇದೆಲ್ಲ ಈಗ ಅರ್ಥವಾಗ್ಲಿಕ್ಕಿಲ್ಲ. ಆರೀಫನೊಟ್ಟಿಗೇ ಹೋಗುವುದಿದ್ರೂ ಈಗಿನಂತೆ ಇರು' ಅಂದಿದ್ದ.

ಆರೀಫನ ಅಮ್ಮಿ, 'ಅವಳೇ ನಮ್ಮ ಸಂಪ್ರದಾಯ ಒಪ್ಪಿಕೊಳ್ಳುವಾಗ ನಿಮ್ಮದೆಂತದು ಫಕೀರಿಚ್ಚ. ಆವತ್ತು ನಮ್ಮ ಆರೀಫನ ಮೇಲೆ ಕೇಸ್ ಮಾಡಿದ್ರಲ್ಲ. ಈಗ ಕಲಿಸ್ತೇವಂತೆ ಅವ್ರಿಗೆ. ನೀನು ಹೆದರ್ಬೇಡ ಮೋಳೆ' ಅಂದಿದ್ದರಿಂದ ಧೈರ್ಯದಿಂದಿದ್ದಳು.

ಜಡ್ಜ್ ಎದುರು 'ನಾನು ಆರೀಫನೊಟ್ಟಿಗೇ ಹೋಗುವವಳು' ಅಂತ ಹೇಳ್ತೇನಲ್ಲ. ಆಗ ಪೊಪ್ಪ ಏನ್ಮಾಡ್ಲಿಕ್ಕಾಗ್ತದಂತೆ. ಹೊಯ್ಗೆ ಕದ್ದು ಸಾಗಿಸುದು, ಬ್ಲೇಡ್‌ಬಡ್ಡಿ ವಸೂಲಿ ಮಾಡುವುದೆಲ್ಲ ಮಾಡುವ ಪೊಪ್ಪನದ್ದೇ ಕ್ರಿಮಿನಲ್‌ಮೈಂಡ್. ಇವತ್ತು ಕೋರ್ಟಿನಿಂದ ಹೋಗುವಾಗ ಆರೀಫನ ಇಡೀ ಕುಟುಂಬವೇ ನನ್ನನ್ನು ಹೇಗೆ ಕರ್‍ಕೊಂಡು ಹೋಗ್ತಾರೆ ಅಂತ ಕಾಣ್ಬೇಕು ಈ ಪೊಪ್ಪ. ತರವಾಡಿನವರನ್ನೆಲ್ಲ ಕರ್‍ಕೊಂಡು ಬಂದಿದ್ದಾರಲ್ಲ. ನಾನು ಹೋಗುವುದನ್ನ ಎಲ್ಲರು ಮಂಗಗಳ